

# ‘ಸೂರಾರೈ ಪೋಟ್ರು’ ರೀಮೇಕ್‌ನಲ್ಲಿ ಅಕ್ಷಯ್?

■ ವಿಶಾಖ ಎನ್‌

ಅಕ್ಷಯ್ ಕುಮಾರ್ ಪುಂಖಾನುಪುಂಖವಾಗಿ ಚಿತ್ರಗಳನ್ನು ಕೊಡುವುದರಲ್ಲಿ ನಿಸ್ಸೀಮರು. ಕೋವಿಡ್ ಬಂದಾಗಲೂ ಅವರು ಸುಮ್ಮನೆ ಕೂತವರಲ್ಲ. ಬೆಳಿಗಿನ ಜಾವ ಎದ್ದು, ವ್ಯಾಯಾಮ ಮಾಡಿ, ಮೇಕಪ್ ಹಾಕಿಸಿಕೊಂಡು ಚಿತ್ರೀಕರಣದ ಜಾಗದಲ್ಲಿ ಎಲ್ಲರಿಗಿಂತ ಮೊದಲು ನಿಲ್ಲುವುದರಿಂದಲೂ ಅವರು ಹೆಸರುವಾಸಿ. ಮೊನ್ನೆಯಷ್ಟೆ ‘ಜಿಗರ್‌ಥಂಡಾ’ ತಮಿಳು ಚಿತ್ರದ ರೀಮೇಕ್ ಆದ ‘ಬಚ್ಚನ್ ಪಾಂಡೆ’ ಸಿನಿಮಾ ಬಿಡುಗಡೆಯಾಗಿತ್ತು. ಅದರಲ್ಲೂ ಅಕ್ಷಯ್ ನಾಯಕ. ಆದರೆ ಅಂದುಕೊಂಡ ಮಟ್ಟಕ್ಕೆ ಅದು ಓಡಲಿಲ್ಲ.

ಈಗ ಅಕ್ಷಯ್ ಕುಮಾರ್ ಎದುರಲ್ಲಿ ‘ಸೂರಾರೈ ಪೋಟ್ರು’ ತಮಿಳು ರೀಮೇಕ್ ಇದೆ. ಅದನ್ನು ಅವರು ಬಹುತೇಕ ಒಪ್ಪಿಕೊಳ್ಳಲಿದ್ದಾರೆ ಎನ್ನುವ ಸುದ್ದಿಯೂ ಇದೆ. ಸುಧಾ ಕೊಂಗಾರಾ ಪ್ರಸಾದ್ ನಿರ್ದೇಶನದ ತಮಿಳು ಚಿತ್ರವು ಡೆಕ್ಕನ್ ಏರ್‌ಲೈನ್ಸ್‌ನ ಕನಸನ್ನು ನನಸಾಗಿಸಿದ ಕ್ಯಾಪ್ಟನ್ ಗೋಪಿನಾಥ್ ಅವರ ಬದುಕಿನ ಕಥನಗಳನ್ನು ಸಡಿಲವಾಗಿ ಅಳವಡಿಸಿಕೊಂಡಂಥ ಕಮರ್ಷಿಯಲ್ ಸಿನಿಮಾ. ಅದು ಬಾಕ್ಸ್‌ಆಫೀಸ್‌ನಲ್ಲಿ ಗೆಲುವು ಸಾಧಿಸಿತ್ತು. ಸೂರ್ಯ ಹಾಗೂ ಅಪರ್ಣಾ ಬಾಲಮುರಳಿ ಜೋಡಿಯ ಅಭಿನಯಕ್ಕೆ ಅಂಕಗಳು ಸಂದಿದ್ದವು.

ಅಕ್ಷಯ್ ಅವರಿಗೆ ಜೋಡಿಯಾಗಿ ಹಿಂದಿ ಚಿತ್ರಕ್ಕೆ ರಾಧಿಕಾ ಮದನ್ ಅವರನ್ನು ಆಯ್ಕೆ ಮಾಡಲು ನಿರ್ಧರಿಸಲಾಗಿದೆ. ಹಿಂದಿ ಚಿತ್ರವನ್ನೂ ಸುಧಾ ನಿರ್ದೇಶಿಸಲಿದ್ದು, ಅಂತಿಮ ಹಂತದ ಸಿದ್ಧತೆಗಳು ನಡೆದಿವೆ. ಅಕ್ಷಯ್ ಆಗಲೀ, ರಾಧಿಕಾ ಮದನ್ ಆಗಲೀ ಈ ಚಿತ್ರದ ಕುರಿತು ಅಧಿಕೃತವಾಗಿ ಏನೊಂದನ್ನೂ ಹೇಳಿಲ್ಲ.

ಚಿತ್ರೀಕರಣಕ್ಕೆ ಮೊದಲು ತಾಲೀಮು ನಡೆಸಿ, ಆಮೇಲೆ ಪಾತ್ರಗಳ ರೂಹು ಸ್ಪಷ್ಟಪಡಿಸಿಕೊಳ್ಳಬೇಕು ಎನ್ನುವುದು ಸುಧಾ ಅವರ ಉದ್ದೇಶ. ತಮಿಳು ಚಿತ್ರದಲ್ಲಿ ಅಲ್ಲಿನ ಸಂಸ್ಕೃತಿಯನ್ನೇ ಇಟ್ಟು ಕಥೆ ಹೆಣೆಯಲಾಗಿತ್ತು. ಹಿಂದಿ ಸಿನಿಮಾದಲ್ಲಿ ಮರಾಠಿ ವ್ಯಕ್ತಿಯಾಗಿ ನಾಯಕನನ್ನು ಬದಲಿಸಲಾಗುತ್ತಿದೆ. ಮೂಲ ಚಿತ್ರಕ್ಕೆ ಸುಧಾ ಅವರೇ ಕಥೆಯನ್ನೂ ಸಿದ್ಧಪಡಿಸಿದ್ದರು.

ಸಿನಿಮಾದ ಡ್ರಾಮಾ ಹಾಗೂ ಕಮರ್ಷಿಯಲ್ ಅಂಶಗಳನ್ನು ನೋಡಿ ಖುದ್ದು ಕ್ಯಾಪ್ಟನ್ ಗೋಪಿನಾಥ್ ಕೂಡ ಬೆರಗುಗೊಂಡಿದ್ದರು. ತಾವು ಹಾಗೆ ಇರದೇಇದ್ದರೂ ಸಿನಿಮಾ ತನ್ನ ಕಥೆಯನ್ನು ಬೇರೆ ರೀತಿ ಪ್ರಕಟಪಡಿಸಿದ್ದಕ್ಕೆ ಅವರ ಆಕ್ಷೇಪವೇನೂ ಇರಲಿಲ್ಲ. ಆ ಚಿತ್ರದಲ್ಲಿನ ಅಭಿನಯಕ್ಕೆ ಸೂರ್ಯ ಅವರಿಗೆ ಕೆಲವು ಪ್ರಶಸ್ತಿಗಳೂ ಸಂದಿವೆ. ಅಲ್ಲಿಗೆ, ಅಕ್ಷಯ್ ರೀಮೇಕ್ ಪಯಣ ಮುಂದುವರಿಯಲಿದೆ ಎಂದಾಯಿತು. ■



# ವಿದ್ಯಾ ಶೈನಿಂಗ್

‘ಶೇರ್‌ನಿ’ ನಂತರ ‘ಜಲ್ಸಾ’ ಹಿಂದಿ ಸಿನಿಮಾದಿಂದಾಗಿ ವಿದ್ಯಾ ಬಾಲನ್ ಮತ್ತೆ ಸುದ್ದಿಯಲ್ಲಿದ್ದಾರೆ. ಈ ಎರಡೂ ಚಿತ್ರಗಳು ತಮ್ಮ ಮಹಿಳಾ ಧ್ವನಿಯಿಂದಾಗಿ ಗುರುತಾಗಿರುವಂಥವು. ಎರಡೂ ಒಟಿಟಿ ವೇದಿಕೆಗಳಲ್ಲಿ ತೆರೆಕಂಡಂಥವು.

ವಿದ್ಯಾ ಹಾಗೂ ಶೆಫಾಲಿ ಶಾ ಇಬ್ಬರ ಸಶಕ್ತ ಅಭಿನಯವನ್ನು ವೀಕ್ಷಕರು ಕೊಂಡಾಡುತ್ತಿದ್ದಾರೆ. ವಿದ್ಯಾ ಇಂತಹ ಪಾತ್ರಗಳನ್ನು ಹೇಗೆ ಹೆಕ್ಕುತ್ತಾರೆ ಎನ್ನುವುದು ಅನೇಕರಲ್ಲಿ ಕುತೂಹಲ ಮೂಡಿಸಿದೆ.

‘ನನ್ನಲ್ಲಿಗೆ ಎಂತೆಂಥವೋ ಸ್ಕ್ರಿಪ್ಟ್‌ಗಳನ್ನು ತರುತ್ತಾರೆ. ಕೆಲವರಂತೂ ನಿರ್ಲಜ್ಜೆಯಿಂದ ಏನೇನೋ ಹೇಳುತ್ತಾರೆ. ಇನ್ನು ಕೆಲವರು ನನ್ನನ್ನೇ ಹೀರೊ ಅಂದುಕೊಂಡೇ ಕಥೆ ಹೆಣೆದಿರುತ್ತಾರೆ. ‘ತುಮ್ಹಾರಿ ಸುಲು’ ಎಂಬ ನವಿರಾದ ಚಿತ್ರಕಥೆ ನಿರ್ದೇಶಿಸಿದ್ದ ಸುರೇಶ್ ತ್ರಿವೇಣಿ ಈ ಚಿತ್ರಕ್ಕೂ ಆ್ಯಕ್ಷನ್–ಕಟ್ ಹೇಳಿದ್ದಾರೆ. ಕಥನದಲ್ಲಿ ನನಗೆ ಅಭಿನಯಿಸಲು ಏನೋ ಹೊಸತು ಇದೆ ಎನಿಸಿದರೆ ಒಪ್ಪಿಕೊಳ್ಳುತ್ತೇನೆ’ ಎಂದು ವಿದ್ಯಾ ಪ್ರತಿಕ್ರಿಯಿಸಿದ್ದಾರೆ.

‘ಸತ್ಯ’ ಹಿಂದಿ ಸಿನಿಮಾ ಬಂದ ನಂತರ ಹೊಗಳಿಕೆಯ ಮಹಾಪೂರವನ್ನೇ ಎದುರಿಸಿದ್ದರೂ ಆಮೇಲೆ ಅವಕಾಶಗಳ ಬರದಿಂದ ಶೆಫಾಲಿ ಶಾ ಕುಗ್ಗಿಹೋಗಿದ್ದರು. ‘ಡೆಲ್ಲಿ ಕ್ರೈಮ್’ ಸರಣಿ ನೆಟ್‌ಫ್ಲಿಕ್ಸ್‌ನಲ್ಲಿ ಪ್ರಸಾರವಾದ ನಂತರ ಅವರಿಗೂ ಬೇಡಿಕೆ ಹೆಚ್ಚಾಗಿದೆ.

ವಿದ್ಯಾ ಪಾಲಿಗೆ ಪ್ರತಿ ಚಿತ್ರವೂ ಒಂದು ಪ್ರಸವ ವೇದನೆಯನ್ನು ನೀಡುವುದಂತೆ. ಸಿನಿಮಾ ಚಿತ್ರೀಕರಣ ಶುರುವಾಗುವಾಗ ಖುಷಿಯಾದರೂ, ಆದಷ್ಟು ಬೇಗ ಮುಗಿಯಲಿ ಎಂದು ಅನಿಸತೊಡಗುತ್ತದಂತೆ. ಚಿತ್ರ ಸಿದ್ಧವಾದೊಡನೆ ಒಂದು ನಿರಾಳ ಭಾವ. ಮುಂದೆ ಯಾವ ಸ್ಕ್ರಿಪ್ಟ್‌ಗೆ ಒಪ್ಪಿಗೆ ಸೂಚಿಸಬೇಕು ಎಂಬ ಗೊಂದಲವಂತೂ ತನಗಿಲ್ಲ ಎಂದು ಅವರು ನಗುತ್ತಾರೆ.

